ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

18 ಕೇಂದ್ರ

ಇಲಾಖೆ / ವಿಷಯ : DEPARTMENT / SUBJECT: (ಸಂಸತ್ ಕಟ್ಟಡ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 17/9/20


# ಟಾಟಾ ಕಂಪನಿ ನಿರ್ಮಿಸಲಿದೆ ನೂತನ ಸಂಸತ್ ಕಟ್ಟಡ

**ಹೊಸದಿಲ್ಲಿ:** ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ನೂತನ ಸಂಸತ್ ಕಟ್ಟಡ ನಿರ್ಮಿಸುವ ಯೋಜನೆಯ ಬಿಡ್ ಪಡೆಯಲು ಟಾಟಾ ಪ್ರಾಜೆಕ್ಟ್ಸ್ ಲಿಮಿಟೆಡ್ ಕಂಪನಿ ಯಶಸ್ವಿಯಾಗಿದೆ. ಸುಮಾರು 861.90 ಕೋಟಿ ರೂ. ವೆಚ್ಚದಲ್ಲಿ ಕಂಪನಿಯು ಭವ್ಯ ಕಟ್ಟಡವನ್ನು ಹಾಲಿ ಸಂಸತ್ ಸಮೀಪವೇ ನಿರ್ಮಿಸಲಿದೆ.

ಕೇಂದ್ರೀಯ ಲೋಕೋಪಯೋಗಿ ಇಲಾಖೆಯು ನೂತನ ಸಂಸತ್ ಕಟ್ಟಡ ನಿರ್ಮಾಣ ಸಂಬಂಧ ಕರೆದಿದ್ದ ಆರ್ಥಿಕ ಬಿಡ್‌ಗಳನ್ನು ಬುಧವಾರ ತೆರೆದಿದ್ದು ಅದರಲ್ಲಿ ಟಾಟಾ ಕಂಪನಿ ಅತ್ಯಧಿಕ ಕಡಿಮೆ ಕೋಟ್ ಮಾಡಿದ್ದರಿಂದ ಅದಕ್ಕೆ ನಿರ್ಮಾಣದ ಗುತ್ತಿಗೆ ಸಿಕ್ಕಿದೆ. ಲಾರ್ಸೆನ್ ಅಂಡ್ ಟರ್ಬೋ ಕಂಪನಿಯು ಟಾಟಾ ಕಂಪನಿಗಿಂತಲು ಅಧಿಕ ಮೊತ್ತ 865 ಕೋಟಿ ರೂ.ಗೆ ಬಿಡ್ ಸಲ್ಲಿಸಿದ್ದರಿಂದ ಯೋಜನೆ ಅದರ ಕೈತಪ್ಪಿದೆ.

ನಿರ್ಮಾಣ ಕಾಮಗಾರಿ ಎರಡು ವರ್ಷದಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಸರಕಾರ ಹೊಸ ಕಟ್ಟಡಕ್ಕೆ ಸುಮಾರು 940 ಕೋಟಿ ರೂ. ವೆಚ್ಚವನ್ನು



- **862** ಕೋಟಿ ರೂ.
- ಹೊಸ ಕಟ್ಟಡದ ಅಂದಾಜು ವೆಚ್ಚ
- ನೂತನ ಸಂಸತ್ ಕಟ್ಟಡ ತ್ರಿಕೋನಾಕೃತಿ ವಿನ್ಯಾಸದಲ್ಲಿರಲಿದೆ
- **2022**ರ ಹೊತ್ತಿಗೆ ನಿರ್ಮಾಣ ಪೂರ್ಣಗೊಳ್ಳುವ ಸಾಧ್ಯತೆ
- ಲಾರ್ಸೆನ್ ಅಂಡ್ ಟರ್ಬೋ ಬಿಡ್ ಹಿಂದಿಕ್ಕಿದ ಟಾಟಾ ಪ್ರಾಜೆಕ್ಟ್ಸ್ ಲಿಮಿಟೆಡ್

ಅಂದಾಜು ಮಾಡಿತ್ತು. ಇದು ಕೇಂದ್ರದ ಸೆಂಟ್ರಲ್ ವಿಸ್ಟಾ ಬ್ಯೂಟಿಫಿಕೇಶನ್ ಯೋಜನೆಯ ಭಾಗವಾಗಿದೆ. ಬ್ರಿಟಿಷ್ ಕಾಲದಲ್ಲಿ ನಿರ್ಮಿಸಲಾಗಿದ್ದ ಪ್ರಸ್ತುತ ಸಂಸತ್ ಕಟ್ಟಡ ವೃತ್ತಾಕಾರದಲ್ಲಿ ಅದನ್ನು ನವೀಕರಿಸಿದ ಬಳಿಕ ಇತರ ಉದ್ದೇಶಗಳಿಗೆ ಬಳಕೆಯಾಗಲಿದೆ ಎಂದು ಮೂಲಗಳು ಹೇಳಿವೆ. 1921ರಲ್ಲಿ ನಿರ್ಮಾಣ ಶುರುವಾಗಿ ಆರು ವರ್ಷಗಳಲ್ಲಿ ಪೂರ್ಣಗೊಂಡಿತ್ತು. 1956ರಲ್ಲಿ ಎರಡು ಮಹಡಿಗಳನ್ನು ಹೆಚ್ಚುವರಿಯಾಗಿ ನಿರ್ಮಿಸಲಾಗಿತ್ತು.

ಅತಿಯಾದ ಬಳಕೆಯಿಂದ ಹಾಲಿ ಸಂಸತ್ ಕಟ್ಟಡಕ್ಕೆ ಧಕ್ಕೆಯಾಗಿದ್ದು ಅದಕ್ಕೆ ಪರ್ಯಾಯ ಕಟ್ಟಡ ಬೇಕಿದೆ. ಅಲ್ಲದೇ ಕ್ಷೇತ್ರಗಳ ಮರು ವಿಂಗಡಣೆ ಬಳಿಕ ಲೋಕಸಭೆಯ ಸ್ಥಾನಗಳ ಸಂಖ್ಯೆ ಹೆಚ್ಚಳವಾಗುವ ಸಾಧ್ಯತೆ ಇದ್ದು ಅದಕ್ಕೆ ಆಸನ ವ್ಯವಸ್ಥೆ ಕೈಗೊಳ್ಳುವುದು ಈಗಿನ ಕಟ್ಟಡದಲ್ಲಿ ಸಾಧ್ಯವಿಲ್ಲ. ಹಾಗಾಗಿ ನೂತನ ಕಟ್ಟಡ ಅವಶ್ಯವಿದೆ ಎಂದು ಹೇಳಿ ತನ್ನ ನಡೆಯನ್ನು ಸರಕಾರ ಸಮರ್ಥಿಸಿಕೊಂಡಿತ್ತು. ಪ್ರತಿಪಕ್ಷಗಳು ಹೊಸ ಯೋಜನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿವೆ. 2022ರ ಹೊತ್ತಿಗೆ ದೇಶವು 75ನೇ ಸ್ವಾತಂತ್ರ್ಯೋತ್ಸವಕ್ಕೆ ಸಾಕ್ಷಿಯಾಗಲಿದ್ದು, ಹೊಸ ಸಂಸತ್ ಕಟ್ಟಡದಲ್ಲಿ ಅಧಿವೇಶನ ನಡೆಯಲಿದೆ ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಕಳೆದ ಜನವರಿಯಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದರು.